
surabhi




GHS UYAWAR1

# ಮುನ್ನುಡಿ

ಶಾಲಾ ವಿದ್ಯಾರ್ಥಿಗಳ ಮನವನ್ನು ಸೆಳೆದ ಮಕ್ಕಳ ಜ್ಞಾನವನ್ನು ವೃದ್ಧಿಸಿದ ಲಿಟಲ್ ಕೈಟ್ ಶಾಲಾ ಮಕ್ಕಳಿಗೆ ಹಲವು ರೀತಿಯಲ್ಲಿ ಮಾರ್ಗದರ್ಶನವಾಗಿದೆ.ಮಾಹಿತಿ ತಂತ್ರ ಜ್ಞಾನದ ಅಂಗವಾದ ಲಿಟಲ್ ಕೈಟ್ ಕ್ಲಬ್ಬಿನ ಮಾರ್ಗದರ್ಶನದಿಂದ ಹಾಗೂ ಮಕ್ಕಳ ಪ್ರಯತ್ನದ ಫಲವಾಗಿ ಜಿ. ಎಚ್.ಎಸ್ ಉದ್ಯಾವರ ಶಾಲೆಯ ವಿದ್ಯಾರ್ಥಿಗಳು ಹಾಗೂ ಕೈಟ್ ಮಿಸ್ಸಸ್ ಪ್ರಸನ್ನ ಮತ್ತು ಮಲ್ಲಿಕಾ ಅವರ ಹಗಲಿರುಳಿನ ಶ್ರಮದಿಂದ "**ಸುರಭಿ**" ಡಿಜಿಟಲ್ ಸಂಚಿಕೆಯಾಗಿ ತನ್ನ ಪರಿಮಳವನ್ನು ಎಲ್ಲೆಡೆ ಪಸರಿಸಿದೆ.ಲಿಟಲ್ ಕೈಟಿನ ಶ್ರಮದಿಂದ ರಚನೆಯಾದ ಈ ಸಂಚಿಕೆಯು ಓದುವ ಪ್ರತಿಯೊಬ್ಬ ವ್ಯಕ್ತಿಯ ಮನದಲ್ಲಿ ತನ್ನ ಛಾಪನ್ನು ಮೂಡಿಸುವುದರಲ್ಲಿ ಸಂಶಯವಿಲ್ಲ.ಈ ಸಂಚಿಕೆಯು ಎಲ್ಲರ ಮನದಲ್ಲಿ ಜ್ಞಾನದ ಬೆಳಕನ್ನು ಮೂಡಿಸಲಿ ಎಂದು ಹಾರೈಸುವ......

ಮುಖ್ಯೋಪಾಧ್ಯಾಯರು
ಪಾಂಡುರಂಗ.ಎಚ್






“ಸಂತೋಷದ ಒಳ ನುಡಿಯಲ್ಲೇ ಬರೆಯುತ್ತಿದ್ದೇನೆ

ಜಿ . ಎಚ್. ಎಸ್ . ಉದ್ಯಾವರ ಎಲ್ಲಾ ಅರ್ಥದಿಂದಲೂ ತನ್ನೆಲ್ಲಾ ಇತಿಮಿತಿಗಳನ್ನು ಮೀರಿ ಹೊಸ ಸಂಭ್ರಮಕ್ಕೆ ಕಾಲಿಟ್ಟಿದ್ದೇವೆ .

ಈ ವರ್ಷ ನಮ್ಮ ಹೆಮ್ಮೆಯ ಸಂಪಾದನೆಯಾದ “Digital Magazine”ನ್ನು ಬಿಡುಗಡೆಗೊಳಿಸುತ್ತಿರುವೆವು .

2018-19 ವರ್ಷದ ಈ ಉನ್ನತ ಮಟ್ಟದ ಸಾಧನೆ ಒಂದು ಹೊಸ ಸ್ಫೂರ್ತಿಯಾಗಿ ನೆಲೆಗೊಳ್ಳಲಿ  ಎಂದು ಹಾರೈಸುತ್ತೇನೆ .

# ಅನುಕ್ರಮಣಿಕೇ

ಜನ್ಮ ಭೂಮಿ -ಪುಣ್ಯ ಭೂಮಿ.......7
ನಮ್ಮ ಶಾಲಾ ವಾರ್ಷಿಕೋತ್ಸವ.......11
IN THE GARDEN.......16
ಹನಿಗವನ.......17
THE SPARROW AND THE FARMER.......18
ರಸ ಪ್ರಶ್ನೆಗಳು.......19
BUTTERFLY, BUTTERFLY.......25
.......25
TO MY MOTHER.......26
NOBODY'S FRIEND.......28
ಒಗಟುಗಳು.......29
ರವಿಯ ಮೋಡಿ.......31
ನನ್ನ ಕನಸಿನ ಭಾರತ.......33
Proverb's.......35
.......38
ನನ್ನ ಭಾರತ.......38
ತಾಯಿಯ ನೀರೀಕ್ಷೆ.......42
THE ASS WHO SANG ALOUD.......47
ನನ್ನ ಕನಸು.......48
ನಾನೊಂದು ವಕೀಲನಾಗಿದ್ದರೆ.......49
THREE LITTLE PIGS.......50
BIRDS.......51
WALKING ON WATER.......52
TRUE LOVE.......54
SEEKING SHELTER.......55
ಗಾದೆಗಳು.......57
ರವಿ.......60
ಜೇನು ಹಕ್ಕಿ.......62

# OUR SCHOOL GHS UDYAWAR



हमारा यह छोटा प्रयास हम आपके सामने प्रस्तुत करेंगे



# ಜನ್ಮ ಭೂಮಿ –ಪುಣ್ಯ ಭೂಮಿ

ವಿವಿಧತೆಯಲ್ಲಿ ಏಕತೆಯ ಸಾರಿ
ನಿಂತಿಹಳು ಭಾರತ ಮಾತೆ !
ಈ ಪುಣ್ಯ ನೆಲದಲಿ ಜನ ಜೀವಿಸುತಿಹರು
ಪ್ರೀತಿ , ಸಹನೆಗಳ ಜೊತೆ !

ಜೀವದ ಕಣ್ಣು ನಗುತಿಹಳು
ನೀಡುತ್ತಾ ಸಿಹಿ ವರ್ಷಧಾರೆ !
ಹನಿಯನ್ನು ಸ್ಪರ್ಶಿಸುತ್ತಾ
ಜಳಕವ ಮಾಡಿಹಳು ಈ ಧರೆ !

ಹಲವು ಸಂಸ್ಕೃತಿಗಳ ನವಭಂಡಾರ
ಆಚಾರಗಳಿಲ್ಲದ ದೇಶ ಶೂನ್ಯ !
ಭಾರತಾಂಬೆಯ ಒಡಲಲಿ ಹುಟ್ಟಿ
ಮನುಕುಲವಾಗಿದೆ ಧನ್ಯ !

ಮನೆಯೇ ಮೊದಲ ಪಾಠ ಶಾಲೆ
ಅಲ್ಲಿಹುದು ಪ್ರೀತಿಯ ಸಂಬಂಧ !
ಸಿಹಿ ಕಹಿಗಳ ಹಂಚುತ ನಾವು
ನಿರ್ಮಿಸಿದ್ದೇವೆ ಅನುಬಂಧ !

ಕಾಯಕದಲ್ಲಿ ಜನ ಮುಳುಗಿಹರು
ಪುರುಸೊತ್ತಿಲ್ಲ ಮಾನವೀಯತೆಗೆ !
ಕಷ್ಟ ಸುಖಗಳನ್ನಂಚುತಲಿದ್ದರೆ
ತಯಾರಾಗುವೆವು ಏಕತೆಗೆ !

ದೇಶದಲ್ಲೆಡೆ ಹಬ್ಬಿದೆ ಪಿಡುಗುಗಳು
ನಡೆಯುತಲಿದೆ ಭ್ರಷ್ಟಾಚಾರ !
ಬೇಸತ್ತು ಹೋದವು ಮಾನವ ಕುಲ
ನಮ್ಮ ಭ್ರಷ್ಟಾಚಾರ, ದೇಶಕೆ ಹಾನಿಕಾರ !

ಸಾಕಪ್ಪ ರಾಷ್ಟ್ರದ ದೌರ್ಜನ್ಯ
ಮೆರೆಸೋಣ ದೇಶದ ಕೀರುತಿ!
ಭಾರತ ನಮ್ಮಯ ಆಲಯ
ನಿತ್ಯವು ಬೆಳಗೋಣ ಆರತಿ !

ಕಥಕ್ಕಳಿ ಕೇರಳದ ಪ್ರಸಿದ್ಧ ಕಲೆ
ರಾಜ್ಯದೆಲ್ಲೆಡೆ ಕಲೆಗಳ ನೆಲೆ !
ಇದುವೇ ದೇಶಕೆ ಹೆಮ್ಮೆ
ದೇಶ ಬೆಳೆಯುವುದು ಮೇಲೆ ಮೇಲೆ !

ಹಲವು ಕ್ಷೇತ್ರದಲ್ಲುತ್ತೀರ್ಣವಾದ ಈ ಭೂಮಿ
ಹೇರಳವಾದ ರಂಗಭೂಮಿ!
ಅಪಾರ ಸಂಪತ್ತಿನ ಪೆಟ್ಟಿಗೆ
ಈ ನನ್ನ ಜನ್ಮ ಭೂಮಿ !

ಹಲವಾರು ನಂಬಿಕೆಗಳ ತಾಣ
ಯಾರ  ಮನದಲಿಲ್ಲ ಭೇದ-ಭಾವ !
ಒಂದಾಗಿ ಬಾಳೋಣ ಎನ್ನುತ್ತಾ
ಮಿಡಿಯುತಿದೆ ಎಲ್ಲ ಜೀವ !

ಇದು ನನ್ನ ಹೆಮ್ಮೆಯ ದೇಶ
ರಕ್ಷಿಸೋಣ ಎಲ್ಲರು ಒಂದಾಗುತ್ತಾ!
ನಾಶಮಾಡುವ ಮನ ಬಂದರೆ
ಸಾಗುವೆವು ಅಳಿನಂಚಿನತ್ತಾ !

# ನಮ್ಮ ಶಾಲಾ ವಾರ್ಷಿಕೋತ್ಸವ

ಅಂದು ಶಾಲೆಯಲ್ಲಿ ಸಡಗರ
ಎಲ್ಲಾ ಮಕ್ಕಳ ಸಮಾಗಮ !
ಜಾತ್ರೆಯಂತಹ ಶಾಲಾ ವಾತಾರಣ
ಅಲಂಕಾಕದಿಂದ ತುಂಬಿತ್ತು !

ಮಕ್ಕಳ ಪ್ರತಿಭೆಯ ನೋಡಲು
ಹರುಷದಿ ಬಂದಿದ್ದರು ರಕ್ಷಕರು !
ಶಾಲಾ ವಾರ್ಷಿಕೋತ್ಸವ ಮಿನುಗಲು
ಒತ್ತಡದಿಂದಿದ್ದರು ಶಿಕ್ಷಕರು !

ಅದೊಂದು ನನ್ನ ಪ್ರಥಮ ವೇದಿಕೆ
ಪ್ರತಿಭೆ ನೀಡಲು ತುಂಬಿತ್ತು ಲವಲವಿಕೆ !

ಎಲ್ಲಾ ಮಕ್ಕಳ ಮೊಗದಲ್ಲಿ ಸಂತೋಷ
ಶಾಲೆಯನ್ನು ಆವರಿಸಿತ್ತು !

ಪ್ರಾರಂಭಗೊಂಡಿತು ಮಹಾ ಸಭೆ
ಮಕ್ಕಳಲ್ಲಿದೆ ಪ್ರತಿಭೆ !
ಕಾಯುತ್ತಿದ್ದರು ಜನ ತವಕದಿ
ಈ ನಮ್ಮ ವಾರ್ಷಿಕೋತ್ಸವದಿ !

ಭಾವಗೀತೆಯು ಶುರುವಾಯಿತು
ನನ್ನ ಮನ ಭಯದಿ ಮುಳುಗಿತು !
ಕರೆದರು ಹೆಸರು ನನ್ನ
ಹಾಡಿದ ನಂತರ ಮನವಾಯಿತು ಚೆನ್ನ !

ಹಲವು ಕಾರ್ಯಕ್ರಮ ಜರಗಿದವು
ಪ್ರತಿ ಮಕ್ಕಳು ಪ್ರತಿಭೆಯ ತೋರಿಸಿದೆವು !
ಎಲ್ಲರು ಆಸ್ವಾದಿಸಿದರು
ಆಸ್ವಾದನೆಯೊಂದಿಗೆ ಮೈ ಮರೆತರು !

ಅಂತ್ಯದ ಬಹುಮಾನ ವಿತರಣಾ ಕಾರ್ಯಕ್ರಮ
ಭಾವಗೀತೆಯಲ್ಲಿ ನನ್ನ ಸ್ಥಾನ ಪ್ರಥಮ !
ಕರಗಳ ಚಪ್ಪಾಳೆ ಮೊಳಗಿತು
ಎರಡು ದಿನದ ಶಾಲಾ ವಾರ್ಷಿಕೋತ್ಸವ ಕೊನೆಗೊಂಡಿತು !

ಎಂತಹ ಶಾಲಾ ಸಡಗರ
ಪ್ರತಿಭೆ ತುಂಬಿತ್ತು ಅಪಾರ ! ಪ್ರತಿಭೆ ಇದ್ದರೆ

प्रकृति की सुरक्षा हमारी रक्षा

प्रकृति का नाश न करो

प्रकृति हमारी माँ है

प्रकृति के बिना जीना संभव नहीं

13

surabhi



# IN THE GARDEN

Bill and Bob are playing.
They are playing in the park.

Bob has a ball in his hand.
Bill has a bat in his hand.

Pat is playing on the swing.
Tina is pushing the swing .

Rob has come to the park with his dog.
They are standing by the side.

# ಹನಿಗವನ

ವಾಣಿ ಮನೆಯ ಮಲ್ಲಿಗೆ
ವೇಣಿ ಮನೆಯ ಸಂಪಿಗೆ
ನಾಣಿ ಕೊಯ್ದು ತಂದು ಕೊಟ್ಟ
ರಾಣಿ ಮನೆಯ ಪೂಜೆಗೆ

ಮೊದಲ ಮಗಳು ಅಮೃತ
ಎರಡನೆಯವಳು ಅಂಜನ
ಮೂರನೆಯವಳು ಅಮೃತಾಂಜನ

ಮರದಿ ಕುಳಿತು ಕಾಗೆ
ಯೋಚಿಸಿತ್ತು ಹೀಗೆ
ಅಡುಗೆ ಮನೆಯ ದೋಸೆ
ಕದಿವ ಬಗೆಯು ಹೇಗೆ

ಜಿರಳೆ ಜರಳೆ
ಏನಿದು ರಗಳೆ
ನಿನ್ನನ್ನು ಹಿಡಿಯಲು
ಬೆಕ್ಕಿನ ತರಳೆ

ಪುಟ್ಟ ತಂಗಿ ಮಲ್ಲಿ
ನಡೆದು ಬರುವಲಿಲ್ಲಿ
ಸುರಿಸುತಿಹಳು ಜೊಲ್ಲು
ಇರವುದೆರಡೆ ಹಲ್ಲು

surabhi

## THE  SPARROW AND THE FARMER

The mother sparrow and her three young ones lived in a cosy nest in a wide field . One day ,the farmer visited the field and said ,"The crop is ready . Tomorrow I will send my relatives to reap the crops ."

The young ones got scared . But the mother sparrow comforted them . She said ,"We will stay here . No one will come to cut the crop .

The following day , the farmer's relatives did not turn up to help him . The farmer said, "Tomorrow my neighbours will come and cut the crop."

Again the mother sparrow comforted her young ones . She told them not to worry .

The next day, the neighbour did not come to cut the crop. The farmer now said ,"tomorrow I will cut the crop myself.

The mother sparrow said ,"We must fly away to another shelter immediately .The farmer is not depending on anyone now. The crop will certainly  be cut tomorrow."

The sparrow and her young ones flew away to another field.

***THE SELF HELP***
***IS THE BEST HELP***

# ರಸ ಪ್ರಶ್ನೆಗಳು

೧. ಭೂಮಿಯ ಉಪಗ್ರಹ ಯಾವುದು?

→ ಚಂದ್ರ

೨.ಭಾರತವು ಪ್ರಪ್ರಥಮವಾಗಿ ಸ್ವಾತಂತ್ರ್ಯ ಸಂಗ್ರಾಮವಾದ ವರ್ಷ ಯಾವುದು
→ 1857

೩. ಜಲಿಯನ್ ವಾಲಾಬಾಗ್ ಹತ್ಯಾಕಂಡವಾದ ವರ್ಷ

1919 ಏಪ್ರಿಲ್ 13

೪ .ಭಾರತ ಯಾವ ಖಂಡದಲ್ಲಿದೆ

ಏಷ್ಯಾ

೫. ಭಾರತದ ಪ್ರಪ್ರಥಮ ವಾರ್ತಾಪತ್ರಿಕೆ ಯಾವುದು
→ ಬಂಗಾಳ್ ಗೆಜಿಟ್

೭. ವಂದೇ ಮಾತರಂ ಗೀತೆ ಬರೆದವರು ಯಾರು
→ ಬಂಕಿಮ ಚಂದ್ರ ಚಟರ್ಜಿ

೮ . ವಿದೇಶಿಯ ವಿರುದ್ಧ ಹೋರಾಡಿದ ಪ್ರಪ್ರಥಮ ಮಹಿಳೆ ಯಾರು
→ ಅಬ್ಬಕ್ಕ

೯. ಮುಸ್ಲಿಂರವರ ಪವಿತ್ರ ದೇವಾಲಯ ಯಾವುದು
→ ಮಕ್ಕ ಮದೀನ

೧೦ . ಶ್ರೀ ಕೃಷ್ಣನ ಮಾವನ ಹೆಸರೇನು
→ ಕಂಸ

೧೧ . ಚಾಂದ್ರದಿನ ಎಂದು ಯಾವ ದಿನವನ್ನು ಗುರುತಿಸಲಾಗಿದೆ
→ ಜುಲೈ 21

೧೨. ಚಂದ್ರನ ವಯಸ್ಸು ಎಷ್ಟು
→4.6 ಮಿಲಿಯನ್ ವರ್ಷಗಳು

೧೩. ಚಂದ್ರನ ಬಗ್ಗೆ ಇರುವ ಅಧ್ಯಯನದ ಹೆಸರೇನು
→ಸೆಲೆನೋಲಜಿ

೧೪ . ಭಾರತದ ಮೊತ್ತಮೊದಲ ಉಪಗ್ರಹ ಯಾವುದು
→ಆರ್ಯಭಟ

೧೫ . ಸೌರವ್ಯೂಹದ ಅತೀ ದೊಡ್ಡ ಗ್ರಹ ಯಾವುದು
→ ಗುರು

೧೬ .ನೀಲಿ ಗ್ರಹ ಎಂದು ಕರೆಯಲ್ಪಡುವುದು ಯಾವುದು
→ಭೂಮಿ

पानी की सुरक्षा देश की सुरक्षा

पानी  के बिना जग है सूना

जल है असली सोना

इसे कभी ना खोना

surabhi



# BUTTERFLY, BUTTERFLY

*Butterfly,butterfly*
*fly in the sky*
*Butterfly,butterfly*
*flies so high*
*Butterfly,butterfly*
*Lands on my thigh*
*Butterfly,butterfly*
*Motionlessly lies,*
*Butterfly, butterfly*
*Gracefully dies.*

# TO MY MOTHER

*To-day's your natal day*
*Sweet flowers I bring;*
*Mother, accept, I pray,*
*My offering.*

*And may you happy live,*
*And long us bless;*
*Receiving as you give*
*Great happiness.*

surabhi



GHS UYAWAR24

# ***NOBODY'S FRIEND***

*She had some sweets that she wouldn't share,*
*She had a book that she  wouldn't lend,*
*She wouldn't let anyone play with her doll,*
*She's nobody friend !*

*He had some toffee, and ate every bit,*
*He had a tricycle he wouldn't lend,*
*He never let anyone play with his train,*
*He's  nobody friend !*

*But I'll share all of my sweets with you ,*
*My ball  and my book and my games  I will  lend,*
*Here's half  my apple  and half my cake,*
*I'm  your friend !*

# ಒಗಟುಗಳು

೧. ಒಂದೆ ಹಪ್ಪಳ ಊರಿಗೆಲ್ಲ ಊಟ...

→ ಚಂದ್ರ

೨ . ಚುಕ್ಕಿ ಇಟ್ಟ ಚೆಲುವೆ, ಅಂಗಳದಲ್ಲಿ ಛಂಗನೆ ನೆಗೆಯುವುದು

→ ಜಿಂಕೆ

೩ . ನೀರಿನಲ್ಲಿ ಹುಟ್ಟಿ, ನೀರಿನಲ್ಲೇ ಸಾಯುವ ಇದಿಲ್ಲದಿದ್ದರೆ ಬಾಳಿಲ್ಲ .

→ ಉಪ್ಪು

೪ . ಮುಳ್ಳುಗಳಿವೆ ಅಪಾಯವಿಲ್ಲ. ಸಂಖ್ಯೆಗಳಿವೆ ಲೆಕ್ಕದ ಪುಸ್ತಕಗಳಲ್ಲ . ಗಂಟೆ ಹೊಡೆಯುತ್ತದೆ , ದೇವಾಲಯವಲ್ಲ . ಹಾಗಾದರೆ ಏನದು

→ ಗಡಿಯಾರ

೫ . ಇದು ನಿಮ್ಮದೇ , ಆದರೆ ನಿಮಗಿಂತ ಇತತರೇ ಜಾಸ್ತಿ ಬಳಸುತ್ತಾರೆ

→ ಹೆಸರು

೬ . ಹಿಡಿದರೆ ಹಿಡಿ ತುಂಬ , ಬಿಟ್ಟರೆ ಮನೆ ತುಂಬ, ನಾ ಯಾರೆಂದು ಹೇಳಿದರೆ ನಿನಗಿಲ್ಲ ಜಂಭ .

→ ಬೆಂಕಿ

೭.ನಕ್ಕರೆ ನಗುತ್ತೆ. ಅತ್ತರೆ ಅಳುತ್ತೆ . ಬೀಳಿಸಿದರೆ ಚೂರಾಗುತ್ತೆ . ಏನದು

→ ಕನ್ನಡಿ

೮. ಮಣಿ ಮಣಿಗಾರ , ಮೈ ತುಂಬ ಮಣಿಶೃಂಗಾರ, ಮುಟ್ಟಿದವರ ಪಾಡು ಹರೋಗರ

→ ಚಕ್ಕುಲಿ

೯. ಕಣ್ಣಿಲ್ಲ ಕಾಲಿಲ್ಲ ಆದರೂ ಚಲಿಸುತ್ತದೆ .
→ ನದಿ

೧೦. ಒಂದು ಹಸ್ತಕ್ಕೆ ನೂರೆಂಟು ಬೆರಳು .
→ ಬಾಳೆಗೊನೆ

೧೨. ಸಾವಿರಾರು ಹಕ್ಕಿಗಳು ಒಂದೇ ಬಾರಿ ಮುಳುಗತ್ತವೆ .
→ ಅಕ್ಕಿ

೧೩. ಮಾತು ಕೇಳಿಸಿದರೂ ಮುಖ ಕಾಣದು ; ಕಿವಿಗೆ  ಹತ್ತಿರವಾದರೂ ಕಣ್ಣಿಗೆ ದೂರ .
→ ಟೆಲಿಫೋನ್

೧೪.ಏರಿ ಮೇಲೆ ಸಾಲಿಗೆ ಗಾಳಿ ಮರವಿದೆ .
→  ಹುಬ್ಬು

# ರವಿಯ ಮೋಡಿ

ಪೂರ್ವ ದಿಗಂತದಿ ಉದಯಿಸಿದನು ರವಿ
ಹೊಂಬಣ್ಣದ ರಂಗಲಿ
ಹೂಗಳು ಅರಳಿತು
ವಿನೋದದಲಿ ।।

ಹಕ್ಕಿಗಳ ಇಂಚರ
ಪ್ರಾಣಿಗಳ ಸಡಗರ
ಬೆಳದಿಂಗಳ ಬೆಳಕಲಿ
ಮರ ಗಿಡಗಳ ತಳಮಳ ।।

ಜುಳು ಜುಳು ನದಿ
ಹರಿಯುವ ತೊರೆ
ಆಹಾ! ಅಂಬರ ಕಾಣಲು
ಬಲು ಚಂದ

ಅಂಬರದಲ್ಲಿ ಸೂರ್ಯನ ಸಿರಿಪಟ
ಹೊಳೆಯುತ ಮಿಂಚು ಸಾಗಿರಲು
ಹಕ್ಕಿಯ ಬಳಗ
ಪ್ರಾಣಿಯ ಬಳಗ
ಹೊರಟಿತು ಆಹಾರ ಹುಡುಕುವುದು

# ನನ್ನ ಕನಸಿನ ಭಾರತ

**ಪೀಠಿಕೆ:** ಭಾರತವು ವಿವಿಧತೆಯಲ್ಲಿ ಏಕತೆಯನ್ನು ಸಾರುವ ದೇಶವಾಗಿದೆ. ಭಾರತ ಸಂಪ್ರಾದಾಯದ ತವರೂರಾಗಿದೆ. ಭಾರತದಲ್ಲಿ ಅನೇಕ ಜಾತಿ,ಮತ,ಪಂಗಡ,ಹಲವು ಸಂಸ್ಕೃತಿ,ಹಬ್ಬಗಳು ಒಳಗೊಂಡಿವೆ.ಭಾರತವು ಬ್ರಿಟಿಷರ ಕೈಯಡಿಯಲ್ಲಿರುವಾಗ ಹಲವಾರು ಮಹಾತ್ಮರು ಭಾರತಕ್ಕಾಗಿ ಹೋರಾಡಿ 1947 ಅಗೋಸ್ಟ್15 ರಂದು ಸ್ವಾತಂತ್ರ್ಯ ತಂದುಕೊಟ್ಟರು. ಭಾರತವನ್ನು ಸ್ವತಂತ್ರ್ಯ ರಾಷ್ಟ್ರವಾಗಿ ಮಾಡಿದರು.. ಭಾರತದಲ್ಲಿರುವಂತಹ ಸಂಪತ್ತು ಬೇರೆ ದೇಶದಲ್ಲೂ ಇಲ್ಲ. ಅದಕ್ಕೆಯೇ ಬೇರೆ ದೇಶದವರು ಭಾರತವನ್ನು ಕೊಳ್ಳೆ ಹೊಡೆಯಲು ಈಗಲೂ ಬರುತ್ತಿದ್ದಾರೆ. ಭಾರತವು ಒಗ್ಗಟ್ಟಿನ ರಾಷ್ಟ್ರವಾಗಿದೆ

**ಅಂದಿನ ಭಾರತ:** ಅಂದು ಭಾರತವು ಒಗ್ಗಟ್ಟಿನಲ್ಲಿ ಕೂಡಿತ್ತು.ಯಾವುದೇ ಬೇಧ ಭಾವ ಇರಲಿಲ್ಲ. ಎಲ್ಲರೂ ಎಲ್ಲಾ ಹಬ್ಬಗಳನ್ನೂ ಒಂದಾಗಿ ಮಾಡುತ್ತಿದ್ದರು.ಆಗಿನ ಕಾಲದಲ್ಲಿ ಭಾರತೀಯರು ಪ್ರಾಣವನ್ನೇ ಬಿಡುತ್ತಿದ್ದರು.ಶತ್ರು ರಾಷ್ಟ್ರಗಳೊಂದಿಗೆ ಒಂದಾಗಿರುತ್ತಿದ್ದರು.ಯಾವುದೇ ಜಾತಿಯನ್ನು ಕೀಳಾಗಿ ನೋಡುತ್ತಿರಲಿಲ್ಲ. ಅಂದಿನ ಕಾಲದಲ್ಲಿ ರಾಜರು ಆಳ್ವಿಕೆ ಮಾಡುತ್ತಿದ್ದರು. ತಮ್ಮ ಪ್ರಜೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಮೊದಲು ತಾವೇ ಯಂತ್ರಗಳನ್ನು ತಯಾರಿಸಿ ಕೆಲಸ

ಮಾಡುತ್ತಿದ್ದರು. ಹಿಂದಿನ ಕಾಲದಲ್ಲಿ ಹಲವಾರು ನಿಯಮಗಳಿತ್ತು. ಗಂಡ ಸತ್ತ ನಂತರ ಹೆಂಡತಿ ಗಂಡನ ಚಿತೆಗೆ ಹಾರುವುದು ಅಥವಾ ಹೂ ಮುಡಿಯದಿರುವುದು, ದೇವಸ್ಥಾನಗಳಿಗೆ ಹೋಗದಿರುವುದು,ಬಾಲ್ಯವಿವಾಹ, ಹೆಣ್ಣು ಮಕ್ಕಳಿಗೆ ಶಿಕ್ಷಣ ಇಲ್ಲದಿರುವುದು ಎಂಬ ಮುಂತಾದ ನಿಯಮಗಳಿದ್ದುವು.

**ಇಂದಿನ ಭಾರತ:** ಇಂದು ನಮ್ಮ ಭಾರತವು ವಿಜ್ಞಾನ ತಂತ್ರಗಳಲ್ಲಿ ಮುಂದುವರಿದಿದೆ . ಬೇರೆ ಅಂಗಡಿಯಿಂದ ಯಂತ್ರಗಳನ್ನು ತಂದು ತಮ್ಮ ಎಲ್ಲಾ ಕೆಲಸಗಳನ್ನು ಮಾಡುತ್ತಾರೆ . ಹೀಗಾದರೆ ನಮಗೆ ವ್ಯಾಯಮ ಎಲ್ಲಿಂದ ಲಭಿಸುತ್ತದೆ?ಇದು ಹಲವಾರು ರೋಗಗಳಿಗೆ ಗುರಿಯಾಗಬಹುದು . ಇಂದು ನಮ್ಮ ದೇಶದಲ್ಲಿ ಕೊಲೆ , ಭ್ರಷ್ಟಾಚಾರ , ಅತ್ಯಾಚಾರ ಎಂಬ ಮುಂತಾದ ಪಿಡುಗುಗಳು ಹೆಚ್ಚಾಗುತ್ತಾ ಹೋಗುತ್ತಿವೆ . ಕೆಲವರು ನಮಗೆ ಮೋಸ ಮಾಡುತ್ತಾರೆ . ಅಲ್ಲದೆ ಇನ್ನು ಕೆಲವರು ಆಸ್ತಿಗಾಗಿ ತಮ್ಮ ಮನೆಯವರನ್ನೇ ಕೊಂದು ಬಿಡುತ್ತಾರೆ . ಯಾರಿಗೂ ಮಾನವೀಯತೆ ಎಂಬುದೇ ಇರುವುದಿಲ್ಲ . ಯಾರಾದರೂ ಕಷ್ಟದಲ್ಲಿದ್ದರೆ ನೋಡಿದರೂ ನೋಡದ ಹಾಗೆ ಹೋಗುತ್ತಾರೆ . ಇಂದು ನಮ್ಮ ದೇಶದಲ್ಲಿ ಮಾನವೀಯತೆಯ ಪ್ರಜ್ಞೆಯೂ ಕಡಿಮೆಯಾಗುತ್ತಾ ಹೋಗಿವೆ . ನಮ್ಮ ದೇಶ ಭೇದ-ಭಾವದಿಂದ ಕೂಡಿದೆ . ಸಂಸ್ಕೃತಿಗಳು ಮಾಯವಾಗಿದೆ .

**ನನ್ನ ಕನಸಿನ ಭಾರತ:** ನನ್ನ ಕನಸೇನೆಂದರೆ ಭಾರತವು ಪುನಃ ವಿವಿಧತೆಯಲ್ಲಿ

ಏಕತೆಯನ್ನು ಹೊಂದಬೇಕು .  ಭೇದ-ಭಾವಗಳನ್ನು ಮಾಡದೆ ಒಂದೇ ಎಂಬ ಭಾವನೆ ಮಾಡಬೇಕು . ಕಳ್ಳತನ ಬಿಟ್ಟು ನಾವೇ ಸ್ವತಃ ದುಡಿದು ಜೀವನ ಸಾಗಿಸಬೇಕು . ಕೊಲೆ , ಭ್ರಷ್ಟಾಚಾರ , ಅತ್ಯಾಚಾರಗಳನ್ನು ಮಾಡದೆ ಬೇರೆಯವರಿಗೆ ಮಾರ್ಗದರ್ಶಕರಾಗಬೇಕು . ಹಿರಿಯರಿಗೆ ಗೌರವ ನೀಡಬೇಕು . ಎಲ್ಲಾ ಹಬ್ಬಗಳನ್ನು ಒಟ್ಟಾಗಿ ಆಚರಿಸಬೇಕು . ಯಾರಿಗೂ ನಾವು ಮೋಸ ಮಾಡಬಾರದು . ನಮ್ಮ ದೇಶವನ್ನು ಅಭಿವೃದ್ಧಿ  ಸ್ಥಾನದ ಕಡೆಗೆ ಸಾಗಿಸಬೇಕು . ಎಲ್ಲಾ ಕ್ಷೇತ್ರ ಗಳಲ್ಲಿ ಭಾರತ  ಉನ್ನತ  ಸ್ಥಾನ     ಕ್ಕೇರುವಂತೆ ಮಾಡಬೇಕು. ಭಾರತೀಯರಾದ ನಾವು ಕೆಟ್ಟ ಆಹಾರಗಳನ್ನು ತಿನ್ನದೆ ಕೃಷಿಕರು ಶ್ರಮಪಟ್ಟು ಮಾಡುವ

ಅನ್ನವನ್ನು ತಿನ್ನಬೇಕು . ಕಸಕಡ್ಡಿಗಳನ್ನು ಅಲ್ಲಲ್ಲಿ ಬಿಸಾಡಬಾರದು . ಹೊರತಾಗಿ ಸಂಗ್ರಹಿಸಿ ಮರುಬಳಕೆ ಮಾಡಬೇಕು .

ಆದ್ದರಿಂದ "ಒಗ್ಗಟ್ಟಿನಿಂದ ಜೀವಿಸೋಣ , ಭಾರತೀಯರೆಂದು ಹೆಮ್ಮೆ ಪಡೋಣ".

# Proverb's

1. A bird in the hand is worth the bush
2. Books and friends should be few and good .
3. Enough is better than too much .
4. Young men think old men fools, old men know young men – to be so.
5. Two head are better than one.
6. Small beginnings make great endings .
7. Better  late than never .
8. A drowning ma will catch
9. Honesty is the best policy.
10. Soft words win hard hearts.
11. A good name is better than riches .
12. Courtesy costs nothing.
13. The world is a stair case, some are going up,  some are coming down .
14. Like  father , like son , Like mother , like  daughter .
15. All  work  and no play makes a jack a dull boy .
16. As  you sow , so you will reap  .

17.Hope is the last things that we lose .

18.Appetite comes with eating .

19.An ounce of a prevention is worth a pound of cure .

20.Learning makes the wise wiser , but the fool more foolish .

21. Vice is its own punishment , virtue its own reward .

22. To forget a wrong is the best reward .

23. An apple a day keeps a doctor away .

24. Land only what you can afford to lose .

25. Among the blind the one – eyed man is king .

# ನನ್ನ ಭಾರತ

ನನ್ನ ಕನಸಿನ ಭಾರತದಲ್ಲಿ ಭಾರತದ ಆದ್ಯಾಂತ ಜನರು ಹೆಮ್ಮೆ ಪಡುವಂತೆ ಭಾರತವು ಕಂಗೊಳಿಸಬೇಕು . ಭಾರತ ಎಂಬ ಮೂರು ಪದದ ಅಕ್ಷರಲ್ಲಿ ವಿಶಾಲವಾದ ಅರ್ಥ ಕಂಡರೂ ಭಾರತದ ವಾಸಿಗಳಾದ ನಾವು ಎದೆಗುಂದಿ ಭಾರತ ದೇಶ ನಮ್ಮದು ಎಂದು ನನ್ನ ಕನಸಿನ ಭಾರತದಲ್ಲಿ ಕಾಣಬೇಕು .ಭಾರತವು ಎಲ್ಲಾ ಕ್ಷೇತ್ರ ಗಳಲ್ಲಿ ಮುಂದ್ದಿದರು ತನ್ನ ಹಿಂದಿನಿಂದ ಇದ್ದ ಕೃಷಿ ಪ್ರಧಾನ ದೇಶ ಎಂಬುದನ್ನು ಕೆಳಗಾಗಿಸುತ್ತಿದೆ .ನನ್ನ ಕನಸಿನ ಭಾರತದಲ್ಲಿ ಭಾರತವು ಹಿಂದಿನಾಗೆ ಇಂದು ಕೂಡ ಕೃಷಿ ಪ್ರಧಾನ ದೇಶವಾಗಿಯೇ ಇರಬೇಕೆಂದು ನನ್ನ ಆಸೆ .

ಕೃಷಿ ಪ್ರಧಾನ ದೇಶ ಮಾತ್ರ ವಲ್ಲದೆ ಇಂದು ನಮಗೆ ಕಾಣಸಿಗುವ ಹಳ್ಳಿ ಪ್ರದೇಶ ಅಲ್ಲಿಯ ವಾತವರಣ ಎಲ್ಲವೂ ಕಣ್ಮರೆಯಾಗುತ್ತಿದೆ . ಆದರೆ ನನ್ನ ಕನಸಿನ ಭಾರತದಲ್ಲಿ ಹಳ್ಳಿಯನ್ನು ಅಲ್ಲಿಯ ಪ್ರದೇಶವನ್ನು ಉಳಿಸಿ ಬೆಳಸಬೇಕೆಂದು ಕನಸು ಕಾಣುತ್ತೇನೆ . ಪ್ರಕೃತಿಯನ್ನು ದೂಪಿಸಿದರೆ ಅದು ನಮ್ಮನ್ನು ದೂಪಿಸುತ್ತದೆ .ನನ್ನ ಕನಸಿನ ಭಾರತದಲ್ಲಿ ಪ್ರಕೃತಿಯನ್ನು ಉಳಿಸುವುದರೊಂದಿಗೆ ಅದನ್ನು ಶುಚಿತ್ವಾಗಿ ಇಡಲು ಕರೆ ನೀಡಬೇಕೆಂಬ ಆಸೆ ಇದೆ .

ಭಾರತ ದೇಶದಲ್ಲಿ ಶಿಕ್ಷಣವು ಅತೀ ಪ್ರಗತಿಯನ್ನು ಸಾಧಿಸುತ್ತಿದೆ. ಭಾರತವು ಶಿಕ್ಷಣದಲ್ಲಿ ಅತೀ  ಮುಂದಿರುವ ದೇಶವಾಗಿದೆ. ಶಿಕ್ಷಣಕಾಗಿ ಪುಸ್ತಕಗಳಿಗೆ ಹಾಗು ಪರೀಕ್ಷೆ ಪತ್ರಿಕೆಗಳಿಗೆ ಎಷ್ಟೋ ಮರಗಳನ್ನು ಕಡಿಯುತ್ತಾರೆ . ಇದೂ ಸಹ ಪರಿಸರ ನಾಶಕ್ಕೆ ಕಾರಣವಾಗುತ್ತದೆ . ಮರಗಳನ್ನು ಕಡಿಯದೇ ಎಲ್ಲಾ ಶಾಲೆ ಇತರ ಸಂಸ್ಥೆಗಳಲ್ಲಿ ಡಿಜಿಟಲ್ ಕ್ಲಾಸ್ ಗಳಿದ್ದರೆ ಅಲ್ಲಿ ಪುಸ್ತಕದ ಅವಶ್ಯಕತೆ ಬೀಳುವುದಿಲ್ಲ . ಮರವು ಉಳಿಯ ಬಹುದು ಶಿಕ್ಷಣವು ಮುಂದುವರಿಯಬಹುದು.

ನನ್ನ ಕನಸಿನ ಭಾರತದಲ್ಲಿ ಕೃಷಿಕರಿಗೆ ಹಾಗೂ ಸೈನಿಕರಿಗೆ ಹೆಚ್ಚು ಪ್ರಾದಾನ್ಯವನ್ನು ಕೊಡಬೇಕು . ಅವರಿಗೆ ಎಲ್ಲಾ ಕ್ಷೇತ್ರ ಗಳಲ್ಲಿ ಮುಂಬರುವ ಅವಕಾಶ ಲಭಿಸಬೇಕು .ಅವರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದೇ ಅವರಿಗೆ ಸಿಗಬೇಕಾದ ಸೌಕರ್ಯ ಗಳು ಅವರಿಗೆ ಲಭಿಸಬೇಕು . ಅವರಿಗೆ ಸರಕಾರದಿಂದ ಹಣದ ವ್ಯವಸ್ಥೆ ಲಭಿಸುವ ಹಾಗೆ ಇರಬೇಕು.

ಬಾರತದಲ್ಲಿ ಗೃಹನಿಯರಿಗೆ ಸಮಾನ ಅವಕಾಶಗಳು ಲಭಿಸಬೇಕು . ಅವರು ಉಪಯೋಗಿಸುವ ವಸ್ತುಗಳಿಗೆ ಬೆಲೆ ಕಡಿಮೆಯಾಗಬೇಕಾಗಿದೆ . ಅತೀ ಹೆಚ್ಚು ಬೆಲೆಯಿರುವ ಗ್ಯಾಸ್ ಸಿಲಿಂಡರಿಗೆ ಬೆಲೆಯನ್ನು ಕಡಿಮೆಗೊಳಿಸಬೇಕಾಗಿದೆ . ಅವರಿಗೆ ಎಲ್ಲಾ ಸ್ಥಳಗಳಲೂ ಸಮಾನ ಮರ್ಯದ ಲಭಿಸಬೇಕು .

ಭಾರತದಲ್ಲಿ ಈಗೀಗಾ ಕೇಳ ಸಿಗುವ ಭ್ರಷ್ಟಚಾರ ,ಅತ್ಯಾಚಾರ , ಲಂಚ ತೆಗೆಯುವುದು ,ಇತರಕೆಟ್ಟ ಸ್ವಭಾವಗಳು ಭಾರತದಲ್ಲಿ ಇನ್ನೂ ಕೇಳಸಿಗಬಾರದು .ಮಹಿಳೆಯರಿಗೆ ಎಲ್ಲಾ ಸ್ಥಳಗಳಲ್ಲೂ ಅವರಿಗೆ ಬೇಕಾದ ಕಾನೂನು ಲಭಿಸಬೇಕು ಎಂದು ನನ್ನ ಕನಸಿನ ಭಾರತದಲ್ಲಿ ಕಾಣಸಿಗಬೇಕು .

ಭಾರತದಲ್ಲಿ ಉತ್ಪದಿಸುವ ವಸ್ತುಗಳ ಸಂಖ್ಯೆ ಅತಿ ಕಡಿಮೆಯಾಗಿದೆ . ಕೈಗಾರಿಕೆ ಪ್ರಗತಿಯೂ ಕಾಣಲೂ ಸಿಕ್ಕರು ಭಾರತವು ಬೇರೆ ದೇಶವನ್ನು ಅವಲಂಭಿಸಿ

ಜೀವಿಸುತ್ತಿದೆ . ಯಾವುದೆಂದರೆ ಚೀನಾ , ಅಫ್ರೀಕಾ , ಇತ್ಯಾದಿ ದೇಶಗಳನ್ನು . ನನ್ನ ಭಾರತ ದೇಶದಲ್ಲಿ ಭಾರತವು ಯಾವ ದೇಶವನ್ನು ಅವಲಂಭಿಸದೆ ಸ್ವತವಾಗಿ ಕೆಲಸ ಮಾಡಬೇಕು ಎಂಬ ಕನಸು ಕಾಣುತ್ತೇನೆ .

ನನ್ನ ಭಾರತ ದೇಶವು ಸ್ವರ್ಗದ ರೀತಿಯಲ್ಲಿ ಕಂಗೊಳಿಸಬೇಕೆಂದು ಕನಸು ಕಾಣುತ್ತೇನೆ . ಭಾರತೀಯ ಎಲ್ಲಾ ಪ್ರಜೆಗಳಿಗೆ ಸಮಾನ ಅವಕಾಶಗಳು ಕಲ್ಪಿಸಬೇಕಾಗಿ ಕನಸು ಕಾಣುತ್ತೇನೆ .

# ತಾಯಿಯ ನೀರೀಕ್ಷೆ

ಒಂದು ಊರಿನಲ್ಲಿ ಅಮ್ಮ ಮತ್ತು ಮಗು ವಾಸಿಸುತ್ತಿದ್ದರು . ಇವರ ಕುಟುಂಬ ಚಿಕ್ಕದಾದದ್ದು ತಂದೆಯು ತೀರಿಹೋಗಿದ್ದರು . ಈ ತಾಯಿಯು ತನ್ನ ಮಗನನ್ನು ಕಷ್ಟಪಟ್ಟು ಕೆಲಸ ಮಾಡಿ ಶಾಲೆಗೆ ಕಲಿಸುತ್ತಿದ್ದರು . ಹೀಗೆ ದಿವಸಗಳು ಕಳೆದಾಗ ಅವನ ಶಿಕ್ಷಣವು ಮುಂದುವರಿಯುತಿತ್ತು . ತಾಯಿಯು ತನ್ನ ಊಟವನ್ನು ಮಗನಿಗೆ ಕೊಟ್ಟು ಶಾಲೆಗೆ ಕಲಿಸುತ್ತಿದ್ದರು . ತಾಯಿಗೆ ಒಂದು ಕನಸಿತ್ತು . ತನ್ನ ಮಗ ಒಳ್ಳೆಯ ಕೆಲಸ ಪಡೆದು ನನ್ನನ್ನು ನೋಡಬಹುದು ಎಂದು . ಹೀಗೆ ಕಳೆದಾಗ ಅವನ ಶಿಕ್ಷಣವು ಕಳೆಯಿತು. ಒಳ್ಳೆಯ ಕೆಲಸವನ್ನು ಪಡೆದನು . ತಾಯಿಯ ಕನಸು ನನಸಾಯಿತು . ತಾಯಿಯು ಮುಪ್ಪಿನ ಪ್ರಾಯಕ್ಕೆ ತಲುಪಿದಳು .ತಾಯಿಯ ಇನ್ನೊಂದು ಕನಸು ಏನೆಂದರೆ ಮಗನ ಮದುವೆ. ಈ ಕನಸು ನನಸಾಯಿತು . ಆದರೆ ಮದುವೆಯಾಗಿ ಬಂದ ಸೊಸೆಯು ತುಂಬಾ ಜೋರಿದ್ದಳು . ತಾಯಿಯ ಒಂದೊಂದು ಕೆಲಸವು ಸೊಸೆಗೆ ಇಷ್ಟವಾಗುತ್ತಿರಲ್ಲ . ಹೀಗೆ ಇರುವಾಗ ಸೊಸೆಯು ತನ್ನ ಗಂಡನಲ್ಲಿ "ನಿನ್ನ ತಾಯಿಯನ್ನು ಯಾವುದಾದರು ಆಶ್ರಮಕ್ಕೆ ಹಾಕು ನಿನ್ನ ತಾಯಿ ಮನೆಯಲ್ಲಿ ಇರುವುದು ಬೇಡ.". ಆಗ ಮಗನು "ಯಾಕೆ ? ನಾನು ನನ್ನ ಅಮ್ಮನನ್ನು ಆಶ್ರಮಕ್ಕೆ ಹಾಕಲಾರೆ" . "ನೀನು ಹಾಕದಿದ್ದರೆ ನಾನು ಈ ಮನೆ ಬಿಟ್ಟು ಹೋಗುತ್ತೇನೆ "ಎಂದಳು. ಇದನ್ನು ಕೇಳಿ ಗಂಡನಿಗೆ ಏನು ಮಾಡಲು ತೋಚದೆ ತಾಯಿಯನ್ನು ಏನೇಲ್ಲಾ ಹೇಳಿ ಆಶ್ರಮಕ್ಕೆ ಮಗನು ಹಾಕಿದನು . ಕೂನೆಗೆ ತಾಯಿಯು

ಆಶ್ರಮದಲ್ಲಿ ಮಗನನ್ನು ನೀರೀಕ್ಷೆ ಮಾಡುತ್ತಿದ್ದಳು. ಆಗ ಅಲ್ಲಿ ಒಬ್ಬ ಮುದುಕನು ಅದೇ ಆಶ್ರಮಕ್ಕೆ ಬಂದ ಈ ತಾಯಿಯು ಮಗನ ಫೋಟೋ ನೋಡುತ್ತಿದ್ದಾಗ ಆ ಮುದುಕ" ಇದು ನಿನ್ನ ಮಗನೇ" ಆಗ ಆ ತಾಯಿ "ಹೌದು ಯಾಕೆ ಈ ಪ್ರಶ್ನೆ ಕೇಳಿದೀರಿ ." ಯಾಕೆಂದರೆ ನಿಮ್ಮ ಮಗನು ಇನ್ನು ನಿಮ್ಮನ್ನು ಕರೆದುಕೊಂಡು ಹೋಗಹಳು ಬರಲಾರನು.ಎಂದು ಆ ಮುದುಕ ಹೇಳಿದ . ಆಗ ಆ ತಾಯಿ "ಇಲ್ಲ ಕಂಡಿತ ಬರುವನು . ನನ್ನಲ್ಲಿ ಅವನು ಮಾತು ಕೊಟ್ಟಿದ್ದಾನೆ" . "ಆಯಿತು ಎಷ್ಟು ದಿನ ಕಾಯುತ್ತಿಯಾ ಎಂದು ನೋಡುತ್ತೇನೆ "ಎಂದು ಮುದುಕ ಹೇಳಿದ . ಹೀಗೆ ದಿವಸಗಳು ಕಳೆಯಿತು . ಆದರೆ ಮಗ ತಾಯಿಯನ್ನು ಕರೆದು ಕೊಂಡು ಹೋಗಳು ಬರಲಿಲ್ಲ . ತಾಯಿಯು ಮಗನಿಗೆ ಫೋನು ಮಾಡುವಾಗ ಮಗ ತೆಗೆಯುತಿರಲಿಲ್ಲ . ತಾಯಿಯು ತನ್ನ ಮಗನನ್ನು ಸಾಯುವ ಸ್ಥಿತಿ ಬರುವ ತನಕವು ನೀರೀಕ್ಷಣೆ ಮಾಡುತ್ತಿದ್ದಳು .ಆದರೆ ಮಗ ಬರಲಿಲ್ಲ . ಕೊನೆಯ ಉಸಿರು ತಾಯಿಯು ಎಳೆದಾಗ ತನ್ನ ಮಗನು ಬಂದ. ಆದರೆ ತಾಯಿಯು ತೀರಿಹೋಗಿದ್ದಳು . ಇದ್ದನು ಕಂಡ ಮಗನು ತುಂಬಾ ಅತ್ತನು .ಆಗ ಆ ಮುದುಕನು ಆ ಸ್ಥಳಕ್ಕೆ ಬಂದು" ನಿನ್ನ ತಾಯಿ ಸಾಯುವ ತನಕ ನಿನ್ನ ನೀರೀಕ್ಷೆಯಲ್ಲಿ ಕಾಯುತ್ತಿದ್ದಳು . ಆದರೆ ನೀನು ಬರಳೇ ಇಲ್ಲ" . ಇದನ್ನು ಕೇಳಿದ ಮಗನಿಗೆ ತನ್ನ ತಪ್ಪಿನ ಪ್ರಯಶ್ಚಿತ್ತವಾಯಿತು . ತಾಯಿಯ ಅಂತ್ಯಸಂಸ್ಕಾರವನ್ನು ವಿಧಿ ವಿಧಾನದೊಂದಿಗೆ ನೆರೆವೆರಿಸಿದನು.

ನೀತಿ : ಕಷ್ಟಪಟ್ಟು ಕಲಿಸಿದ ತಂದೆ ತಾಯಿಯನ್ನು ಮಕ್ಕಳು ನೋಡುದಿಲ್ಲ .

surabhi



GHS UYAWAR40

# THE ASS WHO SANG ALOUD

*Once there lived an ass in a village. He had to work very hard for his master all day. In return, his master let him loose at night graze in the nearby fields.*

*One night while grazing in the field, the ass made friends with a jackal. They used to eat and chat the whole night.*

*One beautiful night the ass felt a strong desire to sing. The jackal warned him that his songs would wake up the farmer. In spite of the jackal's warnings, the ass lifted up his head and brayed at the top of his voice. The jackal immediately ran away. The farmer and his men pushed the ass into a deep pit. The ass dragged himself out of the pit and left with great difficulty*

***THINK TWICE BEFORE YOU ACT***

# ನನ್ನ ಕನಸು

ನಾನೊಂದು ಶಿಕ್ಷಕಿಯಾಗಿದ್ದರೆ
ಎಲ್ಲಾ ಮಕ್ಕಳನ್ನು ಸಮಾನವಾಗಿ
ಪ್ರೀತಿಯಿಂದ ನೋಡುತ್ತಿದ್ದೆ
ಮಕ್ಕಳ ಉತ್ತಮ ಭವಿಷ್ಯಕ್ಕಾಗಿ
ಶ್ರಮಿಸುತ್ತಿದ್ದೆ

ನನ್ನ ಕೆಲಸವನ್ನು ಶ್ರದ್ದೆ, ವಿಶ್ವಾಸ
ನೀಯತ್ತಿನಿಂದ ಮಾಡುತ್ತಿದ್ದೆ
ಮಕ್ಕಳಿಗೆ ಉತ್ತಮ ರೀತಿಯಲ್ಲಿ
ಪಾಠ ಹೇಳಿ ಮಾರ್ಗದರ್ಶಿಯಾಗುತ್ತಿದ್ದೆ

ಮಕ್ಕಳ ಕೆಟ್ಟತನವನ್ನು ತಿದ್ದಿ
ಸರಿ ಪಡಿಸುತ್ತಿದ್ದೆ
ಮಕ್ಕಳಿಗೆ ಒಳ್ಳೆಯ ಜ್ಞಾನವನ್ನು
ಕಲಿಕೆಯಿಂದ ಒದಗಿಸುತ್ತಿದ್ದೆ

ಮಕ್ಕಳಿಗೆ ಅವರ ಗುರಿಯನ್ನು ತಲುಪಲು
ಪ್ರಯತ್ನಿಸುತ್ತಿದ್ದೆ .
ಮಕ್ಕಳ  ಭವಿಷ್ಯವನ್ನು ಕಂಡು
ನನ್ನ ಬದುಕನ್ನು ಸಾರ್ಥಕಗೊಳಿಸುತ್ತಿದ್ದೆ.

# ನಾನೊಂದು ವಕೀಲನಾಗಿದ್ದರೆ

ನೀತಿ , ನ್ಯಾಯದ ಮೊರೆ ಹೋಗುತ್ತಿದ್ದೆ
ನ್ಯಾಯದ ಪರ ನಿಲ್ಲುತ್ತಿದ್ದೆ
ಅಪರಾಧಿಯ ತಪ್ಪಿಗೆ ದಂಡಿಸಿ
ನಿರಪರಾಧಿಯ ಕಣ್ಣೀರ ಒರೆಸಿ
ಎಲ್ಲಾ ಜನಗಳ ಮನ ಗೆಲ್ಲುತ್ತಿದ್ದೆ

ಅಹಂಕಾರದ ವಿರುದ್ಧ ಮೆಟ್ಟಿನಿಂತು
ಕಷ್ಟದಲ್ಲಿನ ಸಜ್ಜನರ ಮನ ಗೆದ್ದು
ನ್ಯಾಯಲಯದ ಮಾನ ಉಳಿಸಿ
ಒಳ್ಳೆದೃಷ್ಠಿಯಿಂದ ಕಾಣುವವರಿಗೆ ನಂಬಿಕೆಯಿರಿಸಿ
ಸೊಕ್ಕನ್ನು ಅಡಗಿಸುತ್ತಿದ್ದೆ

ಕಣ್ಣೀರಲ್ಲೆ ಕೈ ತೊಳೆಯುವ ಮಂದಿಯ ಕಷ್ಟಕ್ಕೆ ಸ್ಪಂದಿಸಿ
ಸಂತೋಷದ ವಾತವರಣವ ಸೃಷ್ಠಿಸಿ
ನಗು ಎಂಬ ವಸ್ತುವನ್ನು ಹುಟ್ಟು ಹಾಕಿ
ದುಃಖದಲ್ಲಿರುವವರಿಗೆ ಹರುಷ ಉಕ್ಕಿ
ಹರಿಯುವಂತೆ ಮಾಡುವುದು ನನ್ನ ಕಾಯ

ಅಪರಾಧಿಯ ಹುಟ್ಟು ಅಡಗಿಸಿ
ನಿರಪರಾಧಿಯ ಪುಣ್ಯ ಕೆಲಸವನ್ನು ಕೊಂಡಾಡಿ
ನ್ಯಾಯಾಲಯದ ಮಾನವನ್ನು ಉಳಿಸಿ
ದೇಶದ ಸಾಮಾಜಿಕತೆಯ ಇಡೀ ದೇಶಕ್ಕೆ ತಿಳಿಸುವೆ

# THREE LITTLE PIGS

*Once there lived three little pigs. The first and second pigs were lazy and they built there houses very quickly with straw. The third pig worked hard all day and built his house strong with bricks. A big bad wolf saw the first and second pigs, and decided to make a meal of them. Even though the pigs tried to hide in their house, the wolf blew it down in*
*minutes. Now ,the two little pigs were terrified and they run to the third pig's house.*

*The wolf tried to huff and puff the house down,but he could not and he died in the attempt to little pigs now felt sorry for being so lazy. They too built their houses with bricks and lived happily ever after.*

# BIRDS

If ever I see,
On bush or tree,
Young birds in a pretty nest,
I must not, in my play,
Steal the birds away,
To grieve their mother's breast.

My mother I Know,
Would sorrow so,
Should I be stolen away,
So I 'll speak to the birds ,
In my softest words,
Nor hurt them in my play.

# *WALKING ON WATER*

*There was once a holy man who wanted to cross a river,*
*on the opposite bank of which,he saw another holy man*
*deep in meditation. He wanted to impress him an so he walked on the Water. On reaching the bank,he went upto the man and asked him , "Did you see what I just did?"*

*"I did," answered the other man patiently. "Where did you learn to do that ?"*

*"well," said the holy man rather haughtily , "I have penance for a long time and have acquired special powers."*

*"Oh, that's OK, but why did you take the trouble of walking on water when the boatman could have ferried you across for fifty paise?"*

## TRUE LOVE

*The butterflies were to tally wet. It was very difficult for them to fly. They looked at the sky. It was still cloudy. The sun was watching the butterflies from behind the clouds.*

*He was pleased to see the love and care among the butterflies. So he chased the clouds away.*

*It stopped raining. The sun dried the butterflies' wings. The three butterflies were happy again. danced in the garden among the flowers till evening.*
*When night fell, they went to sleep.*

# SEEKING SHELTER

*'Sunflower,sunflower,*
*it's raining heavily.*
*Shall we stay here*
*till the rain is over?'*
*asked the butterflies.*

*The sunflower said:*
*'My favourite fellows*
*the red and the yellow ones,*
*you can stay with me*
*till it stops raining.*
*But I can't let in here*
*the white one.'*

*The yellow and the red butterflies replied:*
*'No dear , no dear,*
*we won't stay here,*
*sending away*
*our friend in dismay.'*
*The rain came down like pebbles*
*on the butterflies.*

# ಗಾದೆಗಳು

1. ಒಗ್ಗಟ್ಟಿನಲ್ಲಿ ಬಲವಿದೆ .
2. ಅತೀ ಆಸೆ ಗತಿಗೇಡು .
3. ಅತ್ತೆಗೊಂದು ಕಾಲ , ಸೊಸೆಗೊಂದು ಕಾಲ .
4. ಆಳಾಗಿ ದುಡಿ , ಅರಸನಾಗಿ ಉಣ್ಣು .
5. ಶಕ್ತಿಗಿಂತ ಯುಕ್ತಿ ಮೇಲು .
6. ಬೆಳ್ಳಗಿರುವುದೆಲ್ಲಾ ಹಾಲಲ್ಲ .
7. ಕೋಣದ ಮುಂದೆ ಕಿನ್ನರಿ ಬಾರಿಸಿದಾಗೆ .
8. ತುಂಬಿದ ಕೊಡ ತುಳುಕುವುದಿಲ್ಲ .
9. ಉಪ್ಪಿಗಿಂತ ರುಚಿಯಿಲ್ಲ , ತಾಯಿಗಿಂತ ಬಂಧುವಿಲ್ಲ.
10. ಕುಂಬಾರನಿಗೊಂದು ವರುಷ , ದೊಣ್ಣೆಗೊಂದು ನಿಮಿಷ .
11. ಕೈ ಕೆಸಾರದರೆ ಬಾಯಿ ಮೊಸರು .
12. ಊಟ ಬಲ್ಲವನಿಗೆ ರೋಗವಿಲ್ಲ ,ಮಾತು ಬಲ್ಲವನಿಗೆ ಜಗಳವಿಲ್ಲ .
13. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?

14. ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ .

15. ಮೂರ್ತಿ ಚಿಕ್ಕದಾದರೂ  ಕೀರ್ತಿ ದೊಡ್ಡದು .

16. ನಾಯಿಯ ಬಾಲ ಯಾವತ್ತಿದರೂ ಡೊಂಕೇ ?

17. ಹಿತ್ತಿಲ ಗಿಡ ಮದ್ದಲ್ಲ .

18. ತಾಳಿದವನು ಬಾಳಿಯಾನು .

19. ನಾಳೆ ಎಂಬುವನ  ಮನೆ ಹಾಳು .

20. ಕೈಗೆ ಬಂದ ತುತ್ತು ಬಾಯಿಗಿಲ್ಲ .

21. ಒಬ್ಬರಿಗಿಂತ ಇಬ್ಬರು ಲೇಸು .

22. ಕುಂಬಳಕಾಯಿ ಕಳ್ಳ ಅಂದರೆ ಹೆಗಲುಮುಟ್ಟಿ ನೋಡಿಕೊಂಡ .

23. ದೂರದ ಬೆಟ್ಟ ನುಣ್ಣಗೆ .

24. ಕಾಯಕವೇ ಕೈಲಾಸ .

25. ಕಬ್ಬು ಡೊಂಕಾದರೆ ಸಿಹಿ ಡೊಂಕೆ ?

26. ಕುಣಿಯಲು ಬಾರದವಳು ಅಂಗಳ ದೂರಿದಳು  , ಅಡಿಗೆ ಮಾಡಲು ಬಾರದವಳು ಒಲೆ ದೂರಿದಳು .

27. ಬೆಕ್ಕಿಗೆ ಆಟ , ಇಲಿಗೆ ಪ್ರಾಣ ಸಂಕಟ .

28. ಬೊಗಳುವ ನಾಯಿ ಕಚ್ಚುವುದಿಲ್ಲ .

29. ಮನಸ್ಸಿದ್ದರೆ ಮಾರ್ಗವಿದೆ .

30. ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವಿಲ್ಲ .

31. ಹಾಸಿಗೆ ಇದಷ್ಟು ಕಾಲು ಚಾಚು .

32. ಬೆಳೆಯುವ ಸಿರಿ ಮೊಳಕೆಯಲ್ಲಿ .

33. ಅತಿಯಾದರೆ ಅಮೃತವು ವಿಷ .

34. ವೇದ ಸುಳ್ಳಾದರೂ ಗಾದೆ  ಸುಳ್ಳಾಗದು .

# ರವಿ

ಮೆಲ್ಲ ಮೆಲ್ಲನೆ ಉದಿಸುವ
ಸೂರ್ಯನು ಬಾನಲ್ಲಿ
ಬೆಳಗುವನೂ............
ವಜ್ರದಂತೆ  ಹೊಳೆಯುವ ರವಿಯು
ಕತ್ತಲ ನೀಗುವನೂ ...................
ನಿದ್ರೆಯ ಮಡಿಲಲ್ಲಿ  ಮಲಗಿಹ ಜನಕ್ಕೆ
ಬೆಳಕನು ನೀಡುವನು
ನಿತ್ಯವು ಹೊಳೆಯುವ ಜಗವನು
ಬೆಳಗುತ ನಮ್ಮನು ಪೊರೆಯುವನು

# ಜೇನು ಹಕ್ಕಿ

ಅಂಗಳದಲ್ಲೊಂದು ಹಳದಿ ಬಿದಿರು

ಚಂದದ ಬಿದಿರು  ಸಣ್ಣ ಬಿದಿರು

ರೆಂಬೆಯಲ್ಲೊಂದು  ಪಕ್ಷಿ ಗೂಡು ಕಟ್ಟಿ ವಾಸಿಸುತ್ತಿತ್ತು

ಮೊಟ್ಟೆಯಿಂದ ಹೆಣ್ಣು ಪಕ್ಷಿ

ಕಾವಲು ಕುಳಿತ್ತಿತ್ತು ಗಂಡು ಪಕ್ಷಿ

ಸ್ವಲ್ಪ ದಿವಸ ಕಳೆದಾಗ .....................

ಮೊಟ್ಟೆಗಳು ಬಿರಿಯಲು ಸಮಯವಾಯಿತು

ದುಷ್ಟರೊಬ್ಬರು ಬಂದರು

ಮೊಟ್ಟೆಯನ್ನು ಕೆಳಗೆ ಹಾಕಿದರು

ಮೊಟ್ಟೆಗಳೆರಡು ಮಣ್ಣಿನಲ್ಲಿ

ಬಿದ್ದು ಒಡೆದು ಹೋಯಿತು

ತಾಯಿ ಪಕ್ಷಿ ಬೊಬ್ಬೆ ಹಾಕಿತು

ದೂರ ದೂರ ಹಾರಿತು .

# THANKS